# ಮುರುಘಾಮಠ : ಸಲಹಾ ಸಮಿತಿ ಅಸ್ತಿತ್ವಕ್ಕೆ

**ಚಿತ್ರದುರ್ಗ, ಜೂ. 21 :** ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠಕ್ಕೆ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರ ಅಧ್ಯಕ್ಷತೆಯಲ್ಲಿ ಲಿಂಗಾಯತರು ಮತ್ತು ಲಿಂಗಾಯತೇತರರನ್ನೊಳಗೊಂಡ 40 ಜನರ ಸಲಹಾ ಸಮಿತಿಯನ್ನು ರಚಿಸಲಾಯಿತು.

ಶ್ರೀಮಠದಲ್ಲಿ ನಡೆದ ಸಭೆಯಲ್ಲಿ ಈ ವಿಷಯ ತಿಳಿಸಿದ ಶ್ರೀಗಳು, ಲಿಂಗಾಯಿತೇತರರಿಗೆ ಧಾರ್ಮಿಕ ದೀಕ್ಷೆ ಕೊಟ್ಟ ಮಠ ಚಿತ್ರದುರ್ಗ ಶ್ರೀ ಮುರುಘಾಮಠ. ಶ್ರೀಮಠವು ಅನೇಕ ವರ್ಷಗಳಿಂದ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತ ಬಂದಿದೆ. ದಾಸೋಹ ಸೇವೆ, ಶೈಕ್ಷಣಿಕ ಸೇವೆ ಮೊದಲಾಗಿ ಮುಂದುವರಿಸುತ್ತ ಬಂದಿದೆ. ಶ್ರೀಮಠಕ್ಕೆ ಒಂದು ಸಲಹಾ ಸಮಿತಿಯ ಅವಶ್ಯಕತೆ ಇತ್ತು ಎಂಬ ಅಭಿಪ್ರಾಯ ನಮ್ಮೊಳಗೆ ಬಂದು ಈಗ ಕಾರ್ಯರೂಪಕ್ಕೆ ತರಲಾಗಿದೆ. ಈ ಸಮಿತಿಯಲ್ಲಿ ಲಿಂಗಾಯತೇತರರು ಇದ್ದಾರೆ. ಲಿಂಗಾಯತರಲ್ಲಿ ಅನೇಕ ಉಪಪಂಗಡಗಳು ಇವೆ. ಅಂತಹ ಎಲ್ಲರೂ ಈ ಸಮಿತಿಯಲ್ಲಿ ಇದ್ದಾರೆ. ಬೇರೆ ಸಮುದಾಯದ ಜನರು ಈ ಸಮಿತಿಯಲ್ಲಿ ಇದ್ದಾರೆ. ಇದೊಂದು ವಿಶ್ವಸ್ಥ ಸಮಿತಿ. ಈ ಸಮಿತಿ ಮುಂದಿನ ದಿನಗಳಲ್ಲಿ ಉತ್ತಮ ಕಾರ್ಯ ನಿರ್ವಹಿಸುತ್ತದೆ. ಇದು ಒಳ್ಳೆಯ ಕಾರ್ಯಗಳ ಜೊತೆ ಸಾಗುತ್ತದೆ. ಅಭಿವೃದ್ಧಿಯ ಕಡೆ ನಾವು ಸಾಗಬೇಕು. ಬಸವಕೇಂದ್ರದವರು ಇದರಲ್ಲಿ ಇದ್ದಾರೆ. ಚಲಿಸುವ ಅನುಭವ ಮಂಟಪದ ಕಾರ್ಯಗಳು ನಮ್ಮ ಜೊತೆಯಲ್ಲಿರುತ್ತವೆ ಎಂದು ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಡಿ.ಎಸ್. ಸುರೇಶ್‌ಬಾಬು ಮಾತನಾಡಿ, ಇಂತಹ ಸಮಿತಿಯನ್ನು ಈ ಮೊದಲೇ ಮಾಡಬೇಕಿತ್ತು. ಈ ಸಮಿತಿಯಿಂದ ಭಕ್ತರ ಮತ್ತು ಮಠದ ಮಧ್ಯೆ ಸಂಬಂಧ ಏರ್ಪಡುತ್ತದೆ. ಶ್ರೀಗಳ ನಿರ್ಣಯ ಉತ್ತಮವಾದುದು ಎಂದರು.

ಜಿತೇಂದ್ರ ಎನ್.ಹುಲಿಕುಂಟೆ ಮಾತನಾಡಿ, ಈ ಸಮಿತಿ ಸ್ವಾಗತಾರ್ಹ. ಕೆಟ್ಟ ಗಳಿಗೆಗಳನ್ನು ಮೀರುವುದಕ್ಕೆ ಇಂತಹ ಸಮಿತಿ ಬೇಕು. ಕೆಲವು ಮಠಗಳಿಗೆ ಸೀಮಿತ ಭಕ್ತರಿದ್ದಾರೆ. ಶ್ರೀಗಳ ಆಶಯಗಳನ್ನು ಭಕ್ತರಿಗೆ ತಲುಪಿಸಬೇಕು ಎಂದು ಹೇಳಿದರು.

ಭೀಮಸಮುದ್ರದ ಸಿ. ಶಂಕರಮೂರ್ತಿ ಮಾತನಾಡಿ, ಶ್ರೀಮಠದ ಆಸ್ತಿಪಾಸ್ತಿಗಳು ಶಾಲಾಕಾಲೇಜುಗಳು ಬಹಳ ಇವೆ. ಜಿಲ್ಲಾ ಕೇಂದ್ರಗಳಲ್ಲಿ ಸಲಹಾ ಸಮಿತಿ ಮಾಡಿ ಅಲ್ಲಿಯೇ ನೋಡಿಕೊಳ್ಳಬೇಕು. ಶ್ರೀಗಳ ಎಲ್ಲ ಸಮಸ್ಯೆಗಳ ಜೊತೆಗೆ ನಾವು ಇರುತ್ತೇವೆ ಎಂದರು. ಸಿಂಧಗಿ ಜಿಲ್ಲಾ ಬಸವಕೇಂದ್ರದ ನಾನಾಗೌಡ ಪಾಟೀಲ್ ಮಾತನಾಡಿ, ಶ್ರೀಗಳು ವಿವಿಧ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ.

ಶ್ರೀಗಳು ಪರ್ಯಟನ ಮಾಡದ ಊರು, ದೇಶಗಳಿಲ್ಲ. ಗುರುಗಳಿಗೆ ಏನೇ ಸಮಸ್ಯೆ ಬಂದರೂ ನಾವುಗಳು ಗಟ್ಟಿಯಾಗಿ ನಿಲ್ಲುತ್ತೇವೆ. ನೂರಾರು ವರ್ಷಗಳಲ್ಲಿ ಆಗುವ ಕೆಲಸ ಹತ್ತಾರು ವರ್ಷಗಳಲ್ಲಿ ಶ್ರೀಗಳು ಮಾಡಿ ತೋರಿಸಿದ್ದಾರೆ ಎಂದು ಅಭಿಪ್ರಾಯಿಸಿದರು. ವಕೀಲರಾದ ಎಂ.ಬಿ. ವಿಶ್ವನಾಥ್ ಮಾತನಾಡಿ, ಸಮಿತಿಯ ಅವಶ್ಯಕತೆಯಿದೆ. ಸಲಹಾ ಸಮಿತಿಯ ಸದಸ್ಯರೆಲ್ಲರೂ ಜವಾಬ್ದಾರಿಯಿಂದ ಇರಬೇಕಾಗುತ್ತದೆ ಎಂದು ಹೇಳಿದರು.

ನಿ| ಪ್ರಾಚಾರ್ಯ ಡಾ. ಪಿ. ಶಿವಲಿಂಗಪ್ಪ ಮಾತನಾಡಿ, ಶ್ರೀಗಳು ಒಂದು ಶಕ್ತಿ. 2005ರಲ್ಲಿ ಶ್ರೀಮಠಕ್ಕೆ ಸಂಕಷ್ಟ ಎದುರಾದಾಗ ಮೌನಿಯಾಗಿದ್ದು ಎಲ್ಲವನ್ನು ಎದುರಿಸಿದರು. ಶ್ರೀಗಳ ಕಾರ್ಯವೈಖರಿಗಳು ಎಲ್ಲ ಕಡೆಯು ಪ್ರಚಾರದಲ್ಲಿವೆ ಎಂದರು. ಧಾರವಾಡ ಬಸವಕೇಂದ್ರದ ಈಶ್ವರ ಸಾಣಿಕೊಪ್ಪ ಮಾತನಾಡಿ, ಶ್ರೀಗಳ ಹಿಂದೆ ಇಡೀ ಕರ್ನಾಟಕ ಇದೆ. ನಮ್ಮಂತಹ ಲಕ್ಷಾಂತರ ಭಕ್ತರು ಇದ್ದಾರೆ. ಕಷ್ಟ ಕಾಲದಲ್ಲು ಶ್ರೀಗಳು ಭಕ್ತರನ್ನು ಜೊತೆಗಿಟ್ಟುಕೊಂಡು ಹೋಗಿದ್ದಾರೆ. ಶ್ರೀಗಳು ಭಕ್ತರ ಮನಸ್ಸುಗಳನ್ನು ಕಟ್ಟಿದ್ದಾರೆ ಎಂದು ಹೇಳಿದರು. ಪಟೇಲ್ ಶಿವಕುಮಾರ್ ಮಾತನಾಡಿ, ಶ್ರೀಮಠದಲ್ಲಿ ನೂರಾರು ಅಭಿವೃದ್ಧಿ ಕೆಲಸಗಳು ಆಗಿವೆ. ಪ್ರತಿತಿಂಗಳಿಗೊಮ್ಮೆ ಸಲಹಾ ಸಮಿತಿ ಸಭೆ ಸೇರಿ ಅಭಿವೃದ್ಧಿ ಬಗ್ಗೆ ಚರ್ಚಿಸೋಣವೆಂದರು.

ಮಂಜುನಾಥ್ ನಾಯ್ಕ ಮಾತನಾಡಿ, ಮುರುಘಾಮಠ ಸರ್ವ ಜನಾಂಗದ ಶಾಂತಿಯ ತೋಟ. ನಾಡಿನಾದ್ಯಂತ ಸಂಚರಿಸುತ್ತ ಜನರನ್ನು ಒಗ್ಗೂಡಿಸುವ ಕೆಲಸವನ್ನು ಶ್ರೀಗಳು ಮಾಡುತ್ತಿದ್ದಾರೆ. ಸಲಹಾ ಸಮಿತಿಯದ್ದು ಅಧಿಕಾರವಲ್ಲ, ಜವಾಬ್ದಾರಿಯಾಗಿದೆ

ಎಂದು ನುಡಿದರು. ಎಲ್.ಬಿ. ರಾಜಶೇಖರ್, ಪ್ರದೀಪ್ ಭರಮಸಾಗರ, ಡಿ.ಎಸ್. ಮಲ್ಲಿಕಾರ್ಜುನ್, ನರಗುಂದ ಬಸವಕೇಂದ್ರ ಚನ್ನಬಸಪ್ಪ ಕಂಠಿ ಮಾತನಾಡಿದರು.





